ಅನುಭವದ ಮಹಿಳೆಯರು ಹೆಚ್ಚು ಇಷ್ಟ' ಎಂದ ಅವನು.

ನಾನು ಭಾವುಕಳಾಗಿ ಹೇಳಿದೆ, 'ಮಾರ್ಕೋ, ನಿಮ್ಮನ್ನು ಪ್ರೀತಿಸುತ್ತಿರುವ ವಿಷಯವನ್ನು ನಾನೆಂದೂ ನಿಮಗೆ ಹೇಳಲಿಲ್ಲ. ನಿಜ ಹೇಳಬೇಕೆಂದರೆ, ಈ ಹಿಂದಿನಿಂದಲೇ ನಿಮ್ಮನ್ನು ಪ್ರೀತಿಸುತ್ತಿದ್ದೆ, ಅದನ್ನು ಇಂದು ಹೇಳುತ್ತಿದ್ದೇನೆ.'

ಅವನು ನನ್ನನ್ನು ತಬ್ಬಿಕೊಂಡ.

ಈ ಹೊಸ ಅನುಭವ ಹೊಸದೊಂದು ಜೀವನದೃಷ್ಟಿಯನ್ನು ಕೊಟ್ಟಿತು. ಜೀವನ ಮತ್ತೊಮ್ಮೆ ನನ್ನನ್ನು ಒಂದು ಸುಂದರ ತಿರುವಿನಲ್ಲಿ ತಂದು ನಿಲ್ಲಿಸಿತು. ಅವನು ನನಗೆ ತುಂಬಾ ಇಷ್ಟವಾಗುತ್ತಿದ್ದ, ನಾನು ಅವನನ್ನು 'ಕ್ಯೂಟಿಪಾಯಿ' (ಪ್ರೀತಿಯಿಂದ ಕರೆಯುವ ಶಬ್ದ) ಎಂದು ಕರೆಯಲಾರಂಭಿಸಿದೆ. ಇದು ಅವನ ನಿಕ್‌ನೇಮ್ ಆಯಿತು. ನಮ್ಮಿಬ್ಬರ ಗೆಳೆತನ, ನಮ್ಮ ಕಾಮನ್ ಫ್ರೆಂಡ್ ಕ್ಯಾಥರೀನಾಳ ಮೂಲಕ ಆಗಿತ್ತು. ನಾವು ಡೇಟಿಂಗ್ ಮಾಡುತ್ತಿರುವ ವಿಷಯವನ್ನು ನಾವಿಬ್ಬರೂ ಕ್ಯಾಥರೀನಾಳಿಗೆ ಹೇಳಿದೆವು. ನಮ್ಮ ಎಲ್ಲಾ ಮಿತ್ರರು ನಮ್ಮನ್ನು ಕಪಲ್ ರೂಪದಲ್ಲಿ ನೋಡಲಾರಂಭಿಸಿದರು. ಸಾಮಾನ್ಯವಾಗಿ ನಾವು ಗೆಳೆಯರ ಗುಂಪಿನೊಂದಿಗೆ ಹೊರಗೆ ಪ್ರವಾಸಕ್ಕೆ ಹೋಗಲಾರಂಭಿಸಿದೆವು. ಒಮ್ಮೊಮ್ಮೆ ನಾವಿಬ್ಬರು ಮಾತ್ರ ಹೋಗುತ್ತಿದ್ದೆವು.

ಪ್ರಾರಂಭದಲ್ಲಿ ನಾನು ಅವನ ಫ್ಲ್ಯಾಟಿಗೆ ವೀಕೆಂಡ್ ಕಳೆಯಲು ಮಾತ್ರ ಹೋಗುತ್ತಿದ್ದೆ, ನಂತರ ನಾವು ಒಟ್ಟಿಗೆ ಇರಲು ಆರಂಭಿಸಿದೆವು. ನನ್ನೊಳಗೆ ನನ್ನ ಭಾರತೀಯ ಸಂಸ್ಕಾರಗಳು ತುಂಬಿದ್ದವು. ವಿವಾಹವನ್ನು ಮಾಡಿಕೊಳ್ಳದೆ ಪರ ಪುರುಷನೊಂದಿಗೆ ದೀರ್ಘ ಕಾಲದವರೆಗೆ ರಿಲೇಶನ್‌ಶಿಪ್‌ನಲ್ಲಿರುವುದು ನನಗೆ ರುಚಿಸುತ್ತಿರಲಿಲ್ಲ. ನಾನು ವೈವಾಹಿಕ ರಕ್ಷಕ ಕವಚವನ್ನು ಬಯಸುತ್ತಿದ್ದೆ, ಪತಿಯ ಸರ್‌ನೇಮ್ ಬಯಸುತ್ತಿದ್ದೆ. ನಾನು ಹೆಂಡತಿ, ನಂತರ ತಾಯಿಯಾಗುವ ಕನಸು ಕಾಣುತ್ತಿದ್ದೆ. ನಾನು ಅದೆಷ್ಟೋ ಬಾರಿ ವಿವಾಹದ ಬಗ್ಗೆ ಪ್ರಸ್ತಾಪಿಸಿದೆ. ಅವನು ಪ್ರತಿ ಬಾರಿ ನನ್ನ ಆಗ್ರಹವನ್ನು ಮುಂದಕ್ಕೆ ಹಾಕುತ್ತಾ ಹೇಳಿದ, 'ನಾವು ಮದುವೆಯಾಗಬೇಕಿಲ್ಲ. ಮದುವೆ ಒಂದು ಸಂತಸಭರಿತ ಪರಿವಾರಕ್ಕೆ ಗ್ಯಾರಂಟಿಯಲ್ಲ.'

ಒಂದು ವೇಳೆ ನೀವು ನನ್ನನ್ನು ಮದುವೆಯಾಗದಿದ್ದರೆ, ನಾನು ನಿಮ್ಮ ಜೊತೆಯಲ್ಲಿರುವುದಿಲ್ಲ, ನನ್ನ ಸಂಬಂಧವನ್ನು ಕಳಚಿಕೊಳ್ಳುತ್ತೇನೆ ಎಂದು ಅವನಿಗೆ ಬೆದರಿಕೆ ಹಾಕಿದೆ.

***

ಅದು ಹದಿನಾಲ್ಕನೆಯ ಫೆಬ್ರುವರಿ, ವ್ಯಾಲೆಂಟೈನ್ ದಿನವಾಗಿತ್ತು. ಅಂದು ಆಗಸ ವಿಶೇಷವಾಗಿ ಸ್ವಚ್ಛವಾಗಿದ್ದು, ಬೆಳಕಿನಿಂದ ಕೂಡಿತ್ತು. ಮಾರ್ಕೋ, ಕ್ಯಾಥರೀನಾ ಮತ್ತು ನಮ್ಮ ಕೆಲವು ಕಾಮನ್ ಫ್ರೆಂಡ್ಸ್‌ಗಳನ್ನು ಗಾಲ್ಫ್ ಕೋರ್ಸ್‌ನ ಒಂದು ರೆಸ್ಟೋರೆಂಟಿಗೆ ಆಹ್ವಾನಿಸಿದ. ಎಲ್ಲರೂ ಬಂದ ನಂತರ ಮಾರ್ಕೋ ನನ್ನೆದುರು ಮೊಳಕಾಲೂರಿ ಕೂತು ಒಂದು ಸಣ್ಣ ಡಬ್ಬಿಯನ್ನು ತೆರೆದು ಹಾಡಲಾರಂಭಿಸಿದ,

'ಮುಝುಸೆ ಶಾದಿ ಕರೋಗಿ, ಹಸೀನಾ...'

ಡಬ್ಬಿಯಲ್ಲಿ ಹಳದಿ ಬಂಗಾರದ ವಜ್ರದ ಉಂಗುರ ಹೊಳೆಯುತ್ತಿತ್ತು. ನಾನು ಅವಾಕ್ಕಾದೆ. ನನ್ನ ಬಾಯಿಯಿಂದ ಪ್ರಶ್ನೆಯೊಂದು ಹೊರಟಿತು, 'ನೀವು ಸೀರಿಯಸ್ ಆಗಿದ್ದೀರ...?'

ಕೆಲವು ಕ್ಷಣಗಳ ನಂತರ ನನಗೆ ನಿಜದ ಆಭಾಸವಾಯಿತು. ಅವನು ನಿಜವಾಗಿಯೂ ಸೀರಿಯಸ್ ಆಗಿದ್ದ. ನಾನು ಖುಷಿಯಿಂದ ರೋದಿಸಿದೆ. ಅಳುವ ಧ್ವನಿಯಲ್ಲಿ 'ಯಸ್ ಯಸ್ ಯಸ್...' ಎಂದಷ್ಟೇ ಹೇಳಿದೆ.

ಮಾರ್ಕೋ ನನ್ನ ಬೆರಳಿಗೆ ಉಂಗುರ ತೊಡಿಸಿದ. ಎಲ್ಲರೂ ಚಪ್ಪಾಳೆ ತಟ್ಟಿದರು.

ಮಾರ್ಕೋ ನನಗೊಂದು ವಜ್ರದ ಉಂಗುರ ಕೊಟ್ಟು, ರೊಮ್ಯಾಂಟಿಕ್ ರೀತಿಯಲ್ಲಿ ಪ್ರಪೋಸ್ ಮಾಡುತ್ತಾನೆಂದು ನಾನು ಕನಸಿನಲ್ಲೂ ಯೋಚಿಸಿರಲಿಲ್ಲ. ನಾನು ಸಂತೋಷದಿಂದ ಬೀಗಿದೆ. ಸೋಶಿಯಲ್ ಮೀಡಿಯಾ ಪ್ಲ್ಯಾಟ್‌ಫಾರ್ಮಿನಲ್ಲಿ ಉಂಗುರದೊಂದಿಗೆ ನನ್ನ ಚಿತ್ರಗಳನ್ನು ಪೋಸ್ಟ್ ಮಾಡಿದೆ. ಸಾಕಷ್ಟು 'ಲೈಕ್ಸ್'ಗಳು ಲಭಿಸಿದವು, ಶುಭಹಾರೈಕೆಗಳೂ ಬಂದವು.

ನಾವು ವಿವಾಹದ ಯೋಜನೆಯನ್ನು ಆರಂಭಿಸಿದೆವು. ನಾನು ಮೂರನೆಯ ಬಾರಿಗೆ ವಿವಾಹವಾಗುತ್ತಿದ್ದೆ, ಆದರೆ ಮಾರ್ಕೋಗೆ ಇದು ಮೊದಲ ವಿವಾಹವಾಗಿತ್ತು. ವಿವಾಹದ ವಿಷಯದಲ್ಲಿ ಯೂರೋಪಿನಲ್ಲಿ ಎಷ್ಟು ದೇಶಗಳಿವೆಯೋ, ಅಷ್ಟೇ ಪರಂಪರೆ ಪದ್ಧತಿಗಳಿವೆ. ನಾನು ನನ್ನ ಕಡೆಯಿಂದ ಕೆಲವರನ್ನು ಆಹ್ವಾನಿಸಿ ಉಳಿದೆಲ್ಲವನ್ನೂ ಮಾರ್ಕೋಗೆ ಬಿಟ್ಟೆ. ನೀವು ನಿಮ್ಮಿಷ್ಟದಂತೆ ಮದುವೆಯನ್ನು ಮಾಡಿಕೊಳ್ಳಿ ಎಂದೆ. ಆರಂಭದಲ್ಲಿ ಮದುವೆಯನ್ನು ಬಯಸದ ಮಾರ್ಕೋ, ನಂತರ ಮದುವೆಗೆ ಒಪ್ಪಿದ. ನಂತರ ತುಂಬು ಉತ್ಸಾಹದಿಂದ ತನ್ನನ್ನು ತೊಡಗಿಸಿಕೊಂಡ. ಪದ್ಧತಿಯಂತೆ ವಧುವಿನ ತಂದೆ–ತಾಯಿ ವಿವಾಹದ ಖರ್ಚನ್ನು ಭರಿಸುತ್ತಾರೆ. ನನ್ನ ತಂದೆ–ತಾಯಿ ಇರಲಿಲ್ಲ, ಯೂರೋಪಿನ ಮಾನ್ಯತೆಯಂತೆ ಈಗ ಅದಕ್ಕೆ ವಿಶೇಷ ಮಾನ್ಯತೆ ಸಹ ಇರಲಿಲ್ಲ. ಇಂದಿನ ಯೂರೋಪಿನ ಮಾನ್ಯತೆಯಂತೆ ವಿವಾಹದ ಬಂಧನಕ್ಕೊಳಗಾಗುವ ಜೋಡಿಗಳೇ ಎಲ್ಲಾ ಖರ್ಚುಗಳನ್ನು ನೋಡಿಕೊಳ್ಳುತ್ತಾರೆ. ವಧು–ವರರ ತಂದೆ–ತಾಯಿ ಮತ್ತು ಅತಿಥಿಗಳು ಗಿಫ್ಟ್ ಚೆಕ್ ಮತ್ತು ನಗದನ್ನು ಕೊಡುತ್ತಾರೆ; ನವದಂಪತಿಗಳಿಗೆ ಅಲ್ಪಸ್ವಲ್ಪ ಸಹಾಯವಾಗಲಿ ಎಂಬುದು ಅವರ ಉದ್ದೇಶ. ಆದರೆ ಉಡುಗೊರೆ, ನಗದು ಸಿಗುವುದು ನಂತರದ ವಿಷಯ, ಈಗಂತೂ ನಾವೇ ಎಲ್ಲವನ್ನೂ ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು.

ನಾನು ತುಂಬಾ ಸೂಕ್ಷ್ಮವಾಗಿ ವಿವಾಹದ ಏರ್ಪಾಟುಗಳನ್ನು ಮಾಡಲು ಬಯಸುತ್ತಿದ್ದೆ; ಕೋರ್ಟ್ ಮ್ಯಾರೇಜ್ ಮತ್ತು ಒಂದು ಸ್ಮಾಲ್ ರಿಸೆಪ್ಷನ್ ಇಟ್ಟುಕೊಂಡು ವಿಶೇಷವಾಗಿ ಖರ್ಚಾಗದಂತೆ ನೋಡಿಕೊಳ್ಳಬೇಕೆಂದು ಬಯಸಿದ್ದೆ. ಆದರೆ ಮಾರ್ಕೋ ಅದ್ದೂರಿ ವಿವಾಹವನ್ನು ಬಯಸುತ್ತಿದ್ದ. ನಾನು ವಿವಾಹದ ಎಲ್ಲಾ ಖರ್ಚುಗಳನ್ನು ಅವನ ಮೇಲೆ ಹಾಕಲು ಬಯಸುತ್ತಿರಲಿಲ್ಲ, ಹೀಗಾಗಿ ಇಷ್ಟವಿಲ್ಲದಿದ್ದಾಗ್ಯೂ, ನಾನು ಉಳಿಸಿದ ಅಲ್ಪ ಹಣವನ್ನು ವಿವಾಹದ ಖರ್ಚಿಗೆ ಕೊಟ್ಟೆ.

ನಮ್ಮ ವಿವಾಹದ ಸಮಾರಂಭದಲ್ಲಿ ನನ್ನ ಶಾಲೆಯ ಅಧ್ಯಾಪಕರು, ಮಾರ್ಕೋನ ಕಚೇರಿ ಸಿಬ್ಬಂದಿ, ಕೆಲವು ಸ್ಥಳೀಯ ಮಿತ್ರರು ಹಾಗೂ ಪರಿವಾರದವರು ಹೀಗೆ ಸುಮಾರು ನೂರು ಜನ ವಿವಾಹದಲ್ಲಿ ಕಲೆತರು. ಮಾರ್ಕೋನ ತಂದೆ–ತಾಯಿ, ಸಹೋದರಿ ಮತ್ತು ಕಸಿನ್ಸ್ ನಮ್ಮ ವಿವಾಹದಲ್ಲಿ ಪಾಲ್ಗೊಳ್ಳಲು ಫ್ರಾನ್ಸ್‌ನಿಂದ ಡೆನ್ಮಾರ್ಕ್‌ಗೆ ಬಂದರು. ಅವನ ತಂದೆ–ತಾಯಿಯನ್ನು ನಾನು ಈ ಮೊದಲೇ ಒಮ್ಮೆ ಭೇಟಿಯಾಗಿದ್ದೆ. ಮಾರ್ಕೋ ನನ್ನ ಬಗ್ಗೆ ಅವರಿಗೆ ಹೇಳಿದಾಗ, ಅವರು ನನ್ನನ್ನು ಭೇಟಿಯಾಗಲು ಕೋಪನ್‌ಹೇಗನ್‌ಗೆ ಬಂದಿದ್ದರು. ಹೀಗಾಗಿ ಅವರನ್ನು ಹೊರತುಪಡಿಸಿ ಅವನ ಉಳಿದ ಪರಿವಾರದವರೊಂದಿಗೆ ನನ್ನ ಮೊದಲ ಭೇಟಿಯಾಗಿತ್ತು. ಅವನ ಸಹೋದರಿ ಸಬರೀನಾಳನ್ನು ಸಹ ನಾನು ಮೊದಲ ಬಾರಿಗೆ ಭೇಟಿಯಾಗುತ್ತಿದ್ದೆ.

ನನ್ನ ಇಬ್ಬರು ಸಹೋದರ ಸಹೋದರಿಯಾದ ಜಾರ್ಜ್ ಮತ್ತು ರೇಚಲ್ ಅರಬ್‌ನಿಂದ ನನ್ನ ವಿವಾಹದ ಸಮಾರಂಭದಲ್ಲಿ ಪಾಲ್ಗೊಳ್ಳಲು ಬಂದದ್ದು ನನಗೆ ಅಪಾರ ಸಂತೋಷವನ್ನು ತಂದಿತು. ಅವರು ವಧುವಿನ ಪ್ರತಿನಿಧಿಯಾಗಲು ತುಂಬಾ ಪ್ರಯತ್ನಿಸಿದರು. ನಾನು ಮತ್ತೊಮ್ಮೆ ವಿವಾಹವಾಗುವ ವಿಷಯವನ್ನು ಮಗ ಜೋಶ್‌ಗೂ ಹೇಳಿದೆ. ಅವನಿಂದಲೂ ಶುಭಹಾರೈಕೆಯ ಕಾರ್ಡ್ ಬಂದಿತ್ತು.

ನಾನು ಮತ್ತೊಮ್ಮೆ ಶ್ವೇತ ಮದುವಣಗಿತ್ತಿ ಆದೆ. ನಾನು ಮಾರ್ಕೋಗೆ, ನನ್ನ ಹಳೆಯ ವೆಡ್ಡಿಂಗ್ ಡ್ರೆಸ್ ಧರಿಸುವುದಾಗಿ ಹೇಳಿದೆ. ನಡುವಯಸ್ಸಿನ ವಧು ತನಗಾಗಿ ಹೊಸ ಉಡುಪುಗಳನ್ನು ಖರೀದಿಸುವಳೇ? ಎಂದೆ. ದುಡ್ಡಿಗೆ ಕೊರತೆಯಿರಲಿಲ್ಲ. ಆದರೆ, ಮಾರ್ಕೋ ಒಪ್ಪಲಿಲ್ಲ, ಹೀಗಾಗಿ ಹೊಸ ವೆಡ್ಡಿಂಗ್ ಡ್ರೆಸ್‌ಗಳನ್ನೂ ಕೊಳ್ಳಬೇಕಾಯಿತು.

ವಿವಾಹದ ಆಚರಣೆಗಳು ಆರಂಭವಾದವು. ನಾನು ನನ್ನ ಹಿಂದಿನ ಜೀವನದ ವಿಚಾರಗಳು, ವಿಕಾರಗಳು ಮತ್ತು ಮುರಿದುಹೋದ ಪ್ರೀತಿಯನ್ನು ತೊಳೆಯಲು ವಿವಾಹದ ದಿನ ಬೆಳಿಗ್ಗೆ ದೀರ್ಘ ಸ್ನಾನ ಮಾಡಿದೆ. ರೇಚಲ್ ಸಿದ್ಧಳಾಗಲು ಸಹಾಯ ಮಾಡಿದಳು. ತನ್ನ ಸ್ನೇಹಿತನ ಮನೆಯಲ್ಲಿ ಶೃಂಗರಿಸಿಕೊಳ್ಳುತ್ತಿದ್ದ ಮಾರ್ಕೋ ವರನಾಗಿ ನಮ್ಮ ಮನೆಗೆ ಬಂದ. ನನ್ನ ಕೈ ಹಿಡಿದು ನನ್ನನ್ನು ಚರ್ಚ್‌ಗೆ ಕರೆದೊಯ್ದ. ಚರ್ಚ್ ದ್ವಾರದಲ್ಲಿ ಅವನ ಕಿರಿಯ ಕಸಿನ್ ಸಹೋದರ–ಸಹೋದರಿಯರು ಬಿಳಿ ರಿಬ್ಬನ್‌ನಿಂದ ನಮ್ಮ ಮಾರ್ಗವನ್ನು ತಡೆದರು. ನಾನು ರಿಬ್ಬನ್ ಕತ್ತರಿಸಿದೆ; ನಾನು ನನ್ನ ಮಾರ್ಗದ ಸಮಸ್ತ ವಿಘ್ನಗಳನ್ನು ನಾಶ ಮಾಡುತ್ತಿದ್ದೇನೆ ಎಂಬುದು ಇದರ ಪ್ರತೀಕವಾಗಿತ್ತು.

ಮಾರ್ಕೋ ಸಂಪ್ರದಾಯವನ್ನು ಪಾಲಿಸುತ್ತಾ